ರಾಜ್ಯದ ವಿದ್ಯುತ್ ಯೋಜನೆಗಳಿಗೆ ವಿಶ್ವಬ್ಯಾಂಕ್ ಸಾಲ

289-ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದ ವಿದ್ಯುತ್ ಯೋಜನೆಗಳಿಗೆ ವಿಶ್ವಬ್ಯಾಂಕ್‌ನಿಂದ ಕೇಳಲಾಗಿದ್ದ ನೆರವಿನ ಮೊತ್ತವೆಷ್ಟು?*

ಆ) *ಈ ಯೋಜನೆಗಳಿಗೆ ನೆರವನ್ನು ನೀಡಲು ವಿಶ್ವಬ್ಯಾಂಕ್ ನಿರಾಕರಿಸಿರುವುದು ನಿಜವೆ, ಕಾರಣವೇನು?*

ಇ) *ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ವಿದೇಶ ಪ್ರವಾಸದ ಸಮಯದಲ್ಲಿ ವಿಶ್ವಬ್ಯಾಂಕಿನ ಅಧಿಕಾರಿಗಳ ಜೊತೆ ಈ ವಿಷಯವಾಗಿ ಚರ್ಚೆ ನಡೆಸಿದ್ದಾರೆಯೇ?*

ಈ) *ವಿಶ್ವಬ್ಯಾಂಕ್ ಸಾಲದ ನೆರವನ್ನು ನಿರಾಕರಿಸಿರುವುದರಿಂದ ರಾಜ್ಯದ ವಿದ್ಯುತ್ ಯೋಜನೆಗಳನ್ನು ಪೂರ್ಣಗೊಳಿಸಲು ಯಾವ ರೀತಿ ಹಣ ಸಂಗ್ರಹಿಸಲಾಗುವುದು?*

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) 425.36 ಕೋಟಿ ರೂಪಾಯಿಗಳ ಸಾಲದ ನೆರವನ್ನು ಒದಗಿಸಲಾಗಿತ್ತು.

ಆ) ಹೌದು. ನಿರಾಕರಣೆಯ ಕಾರಣಗಳು ಕೆಳಕಂಡಂತಿವೆ.

1)ಶರಾವತಿ ಟೇಲ್ ರೇಸ್ ಸ್ಕೀಮಿಗೆ ಕೇಂದ್ರ (ಭಾರತ ಸರ್ಕಾರ) ಪರಿಸರ ಹಾಗೂ ಅರಣ್ಯ ಇಲಾಖೆಯ ಅನುಮತಿ ದೊರೆಯದಿರುವುದು.

2) ಕರ್ನಾಟಕ ವಿದ್ಯುತ್ ಯೋಜನೆಗಳು - 1ರಡಿಯ ಕದ್ರಾ ಮತ್ತು ಕೊಡಸಳ್ಳಿ ಯೋಜನೆಯ ಪುನರ್ವಸತಿಗಾಗಿ ಬೇಕಾಗಿರುವ ಅರಣ್ಯ ಭೂಮಿಗೆ ಅನುಮೋದನೆ ದೊರೆಯದೆ ಇದ್ದುದರಿಂದ.

3)ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ಬಂಡವಾಳ ಹೂಡುವಿಕೆಯ ಮೇಲಿನ ಶೇಕಡಾ 3 ರಷ್ಟು ಮತ್ತು ಮೇಲ್ಪಟ್ಟು ಲಾಭ ಪಡೆಯದಿರುವುದು ಮತ್ತು

4)ತಲಕಳಿಲೆ ಅಣೆಕಟ್ಟಿನ ದುರಸ್ತಿ ಕೆಲಸದ ಸಲುವಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ವಿಶ್ವಬ್ಯಾಂಕಿಗೆ ತೃಪ್ತಿ ಆಗುವ ರೀತಿಯಲ್ಲಿ ಒಪ್ಪಂದವನ್ನು ಮಾಡಿಕೊಳ್ಳದೆ ಇರುವುದು.

ಇ) ಹೌದು.

ಈ) ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ದೀರ್ಘಾವಧಿ ಸಾಲ ಸಂಪತ್ತುಗಳನ್ನು ಪಡೆದುಕೊಳ್ಳಲು ಕರ್ನಾಟಕ ವಿದ್ಯುತ್ ನಿಗಮವು ಪ್ರಯತ್ನಿಸುತ್ತಿದೆ.

ಹೇಮಾವತಿ ಎಡದಂಡೆ ನಾಲಾ ವಿಭಾಗದಲ್ಲಿ ಚಟಂಗೆರೆ ಸುರಂಗಕಾಲುವೆ

96-ಶ್ರೀ ಡಿ.ಹಲಗೇಗೌಡ (ಪಾಂಡವಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹೇಮಾವತಿ ಎಡದಂಡೆ ನಾಲಾ ವಿಭಾಗದಲ್ಲಿ ಚಟ್ಟಂಗೆರೆ ಸುರಂಗ ಕಾಲುವೆಯ ಬಳಿ ಸುರಂಗ ಕಾಲುವೆಯಿಂದ ತೊಂದರೆಗೀಡಾದ ಹಳ್ಳಿಗಳ ರೈತರುಗಳಿಗೆ ವ್ಯವಸಾಯ ಮತ್ತು ಕುಡಿಯುವ ನೀರಿಗೆ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಗ್ಗೆ ಸಾರ್ವಜನಿಕರಿಂದ ಸರ್ಕಾರಕ್ಕೆ ಮನವಿಗಳು ಬಂದಿವೆಯೇ?*

ಇ) *ತೊಂದರೆಗೊಳಗಾದ ರೈತರುಗಳಿಗೆ ಏತ ನೀರಾವರಿ ಸೌಲಭ್ಯ ಕಲ್ಪಿಸಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆಯೇ?*

ಈ) *ಹಾಗಾದರೆ ಇನ್ನೂ ಏತ ನೀರಾವರಿ ಕಾಮಗಾರಿಗಳನ್ನು ಪ್ರಾರಂಭಿಸದಿರುವುದಕ್ಕೆ ಕಾರಣವೇನು?*